ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 25-07-2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br><br>ಕೃಷ್ಣಭೈರೇಗೌಡ,<br>ಕೃಷಿ ಸಚಿವರು | 26-07-2016<br>ಮಂಗಳವಾರ<br>ಬೆಳಿಗ್ಗೆ<br>11-00 ಗಂಟೆಗೆ | ಕೊಠಡಿ ಸಂಖ್ಯೆ 244<br>ಎರಡನೇ ಮಹಡಿ,<br>ವಿಕಾಸ ಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ರಿಯೋ ಒಲಂಪಿಕ್ಸ್‌ಗೆ ಅರ್ಹತೆ ಪಡೆದ ರಾಜ್ಯದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಯುವಜನ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ಖಾತೆ ರಾಜ್ಯ ಸಚಿವ ಪ್ರಮೋದ್ ಮಧ್ವರಾಜ್ ಅವರು 2016 ರ ರಿಯೋ ಒಲಂಪಿಕ್ಸ್‌ಗೆ ಅರ್ಹತೆ ಪಡೆದ ಕರ್ನಾಟಕದ ಕ್ರೀಡಾಪಟುಗಳಿಗೆ ತಲಾ 2.00 ಲಕ್ಷ ರೂಪಾಯಿಗಳ ಪ್ರೋತ್ಸಾಹಧನವನ್ನು ಪ್ರಕಟಿಸಿದ್ದಾರೆ.

ಈ ಪ್ರೋತ್ಸಾಹಧನ ಪಡೆದ ರಾಜ್ಯದ ಕ್ರೀಡಾಪಟುಗಳೆಂದರೆ ಹಾಕಿ ಪಂದ್ಯದ ಎಸ್. ವಿ. ಸುನೀಲ್, ವಿ. ಆರ್. ರಘುನಾಥ್, ಎಸ್. ಕೆ. ಉತ್ತಪ್ಪ, ನಿಖಿನ್ ತಿಮ್ಮಯ್ಯ, ಅಥ್ಲೆಟಿಕ್ಸ್‌ನ ವಿಕಾಸ್‌ಗೌಡ ಮತ್ತು ಎಂ. ಆರ್. ಪೂವಮ್ಮ, ಟೆನ್ನಿಸ್‌ನ ರೋಹನ್ ಬೋಪಣ್ಣ,

ಬ್ಯಾಡ್ಮಿಟಂನ್‌ನ ಅಶ್ವಿನಿ ಪೊನ್ನಪ್ಪ, ಶೂಟಿಂಗ್‌ನ ಪಿ. ಎನ್. ಪ್ರಕಾಶ್ ಹಾಗೂ ಗಾಲ್ಫ್‌ನ ಅದಿತಿ ಅಶೋಕ್ ಸೇರಿದ್ದಾರೆ.

ರಿಯೋ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ದೇಶವನ್ನು ಪ್ರತಿನಿಧಿಸಲು ಅರ್ಹತೆ ಪಡೆದ ರಾಜ್ಯದ ಎಲ್ಲ ಕ್ರೀಡಾಪಟುಗಳನ್ನು ಸಚಿವರು ಅಭಿನಂದಿಸಿದ್ದು ರಾಜ್ಯ ಹಾಗೂ ದೇಶಕ್ಕೆ ಕೀರ್ತಿ ತರಲೆಂದು ಆಶಿಸಿದ್ದಾರೆ.

ಬಾಬು/ಕೆಎಂ

# ಮೊಬೈಲ್ ಫೋನ್ ದುರಸ್ತಿ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವಕ ಯುವತಿರಿಗಾಗಿ ಮೊಬೈಲ್ ಫೋನ್ ದುರಸ್ತಿ ಶಿಬಿರವನ್ನು ಜುಲೈ 28 ರಿಂದ ಕುಂಬಳಗೋಡಿನಲ್ಲಿ ಏರ್ಪಡಿಸಿದೆ. ಆಸಕ್ತ ಯುವಕ ಯುವತಿಯರು ವಿವರಗಳೊಂದಿಗೆ ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080– 22214911 ಮೊಬೈಲ್ 98808 39295 ಸಂಪರ್ಕಿಸಲು ಕೋರಿದೆ.

ಬಾಬು/ಕೆಎಂ

# ಪರೀಕ್ಷಾ ಫಲಿತಾಂಶ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಪ್ರಥಮ ಮತ್ತು ದ್ವಿತೀಯ ವರ್ಷದ ಡಿಪಿಇಡಿ ಪರೀಕ್ಷೆಗಳ ಫಲಿತಾಂಶವನ್ನು ಜುಲೈ 28 ರಂದು ಬೆಳಿಗ್ಗೆ 11–00 ಗಂಟೆಗೆ ಹಾಗೂ ಮಂಡಳಿಯ ವೆಬ್‌ಸೈಟ್‌ನಲ್ಲಿ www.kseeb.kar.nic.in ಜುಲೈ 27 ರಂದು ಮಧ್ಯಾಹ್ನ 2–00 ಗಂಟೆಗೆ ಪ್ರಕಟಿಸಲಿದೆ.

ಬಾಬು/ಕೆಎಂ

# ರಾಜ್ಯ ಕಾನೂನು ವಿಶ್ವವಿದ್ಯಾಲಯ ಕುಲಪತಿ ನೇಮಕಾತಿ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಹುಬ್ಬಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಯವರ ಹುದ್ದೆ ಖಾಲಿ ಇದ್ದು ಅದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಯುಜಿಸಿ ಮಾರ್ಗದರ್ಶನಗಳನುಸಾರ ಕುಲಪತಿಗಳ ನೇಮಕಾತಿಗೆ ಇರುವ ಅರ್ಹತಾ ಅಗತ್ಯಗಳೆಂದರೆ ಗರಿಷ್ಠ ಮಟ್ಟದ ಸಾಮರ್ಥ್ಯ, ಪ್ರಾಮಾಣಿಕತೆ, ಸನ್ನಡತೆ ಹಾಗೂ ಸಾಂಸ್ಥಿಕ ಬದ್ಧತೆ ಹೊಂದಿರುವ ವ್ಯಕ್ತಿಗಳನ್ನು ಕುಲಪತಿಯನ್ನಾಗಿ ನೇಮಿಸಿಕೊಳ್ಳಲಾಗುವುದು. ನೇಮಕಗೊಳ್ಳುವ ಕುಲಪತಿಯ ಸುಪ್ರಸಿದ್ಧವಾದ ಸಂಶೋಧನೆ ಮತ್ತು/ಅಥವಾ ಶೈಕ್ಷಣಿಕ ಆಡಳಿತಾತ್ಮಕ ಸಂಸ್ಥೆಯೊಂದರಲ್ಲಿ ತತ್ಸಮಾನ ಹುದ್ದೆಯಲ್ಲಿ ಕನಿಷ್ಠ ಹತ್ತು ವರ್ಷಗಳ ಅನುಭವದೊಂದಿಗೆ ಪ್ರಸಿದ್ಧರಾದ ಶಿಕ್ಷಣ ತಜ್ಞರಾಗಿರಬೇಕು.

ಕುಲಪತಿಯವರ ನೇಮಕಾತಿಗೆ ಅರ್ಹತಾ ಅಗತ್ಯ ಪೂರೈಸುವ ಆಸಕ್ತ ವ್ಯಕ್ತಿಗಳು 2016 ರ ಆಗಸ್ಟ್ 10 ರೊಳಗೆ ತಮ್ಮ ಸಾಧನೆಗಳು, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವಗಳನ್ನು ಸೂಚಿಸಿದ ವಿವರವಾದ ವ್ಯಕ್ತಿಗತ ವಿವರವನ್ನೊಳಗೊಂಡ ಅರ್ಜಿಗಳನ್ನು ಆರು ಪ್ರತಿಗಳಲ್ಲಿ ಶ್ರೀ ಕೆ. ನಟರಾಜನ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ಕೊಠಡಿ ಸಂಖ್ಯೆ 33 ನೆಲ ಅಂತಸ್ತು, ವಿಧಾನ ಸೌಧ, ಬೆಂಗಳೂರು – 560 001 ದೂರವಾಣಿ ಸಂಖ್ಯೆ 080– 22353111, 080– 22033693 ಇವರಿಗೆ ತಲುಪಿಸುವುದು.

ಬಾಬು/ಕೆಎಂ

# ರಾಜ್ಯದಲ್ಲಿ 20,000 ನವೋದ್ಯಮ ಆರಂಭಿಸುವ ಗುರಿ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ 20,000 ಸ್ಟಾರ್ಟ್ ಅಪ್(ನವೋದ್ಯಮ) ಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಖಾತೆ ರಾಜ್ಯ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸ್ಟಾರ್ಟ್‌ಅಪ್ (ನವೋದ್ಯಮ) ನೀತಿ 2015–20 ರ ಅನ್ವಯ ಉದ್ದಿಮೆಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಘಟಕವನ್ನು ಈಗಾಗಲೇ ಪ್ರಾರಂಭಿಸಲಾಗಿದೆ ಎಂದು ಮಾತನಾಡಿದ ಸಚಿವರು ಆಸಕ್ತ ಉದ್ದಿಮೆದಾರರು ತಮ್ಮ ಉದ್ದಿಮೆಗಳನ್ನು ಪ್ರಾರಂಭಿಸಲು ಸ್ಟಾರ್ಟ್ ಅಪ್ ಅಂತರ್ಜಾಲದ ಮೂಲಕ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬಹುದಾಗಿದೆ ಎಂದರು.

ಸರ್ಕಾರ ಈ ಯೋಜನೆಗೆ ತಂತ್ರಜ್ಞಾನ, ಹಣಕಾಸಿನ ನೆರವು ಸೇರಿದಂಗತೆ ಹಲವು ಬಗೆಯ ಪ್ರೋತ್ಸಾಹಗಳನ್ನು ಒಂದೇ ಸೂರಿನಡಿ ಕಲ್ಪಿಸಲಿದೆ ಎಂದ ಪ್ರಿಯಾಂಕ ಖರ್ಗೆ ಅವರು ಸ್ಟಾರ್ಟ್ ಅಪ್ ಉದ್ದಿಮೆಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸರ್ಕಾರ ಎಲ್ಲ ರೀತಿಯ ಪೂರಕ ನೆರವು ನೀಡಲಿದೆ ಎಂದು ಮಾತನಾಡಿದರು.

ಸೂಕ್ಷ್ಮ ಮತ್ತು ಉದ್ದಿಮೆಗಳನ್ನು ಆರಂಭಿಸಲು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದಲ್ಲದೆ ಉದ್ದಿಮೆದಾರರೊಂದಿಗೆ ತಿಂಗಳಿಗೊಮ್ಮೆ ಚರ್ಚಿಸಿ ಸಮಸ್ಯೆಗಳಿದ್ದಲ್ಲಿ ಬಗೆಹರಿಸಲಾಗುವುದು ಎಂದ ಸಚಿವರು ರಾಷ್ಟ್ರದಲ್ಲೇ ರಾಜ್ಯ ಸ್ಟಾರ್ಟ್

ಅಪ್ ಬೆಳವಣಿಗೆಯಲ್ಲಿ ಮಂಚೂಣಿಯಲ್ಲಿರುವ ರಾಜ್ಯವಾಗಿದೆ ಎಂದು ತಿಳಿಸಿದರು.

ಸ್ಟಾರ್ಟ್ ಅಪ್ ಉದ್ದಿಮೆಗಳ ಅನುಕೂಲಕ್ಕಾಗಿ ಹಾಗೂ ಅಗತ್ಯ ತಂತ್ರಜ್ಞಾನದ ನೆರವು ಕಲ್ಪಿಸಲು ಬಿ.ಎಸ್.ಎನ್.ಎಲ್. ಐ.ಬಿ.ಎಂ. ಅಮೇಜಾನ್ ಸಂಸ್ಥೆಗಳು ಸೇರಿದಂತೆ ವಿವಿಧ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಅಂತರ್ಜಾಲದ ಮೂಲಕ ತಂತ್ರಜ್ಞಾನ ಒದಗಿಸಲಾಗುತ್ತಿದೆ ಎಂದ ಸಚಿವರು ಆಗಸ್ಟ್ 16 ರಂದು ಮೊದಲ ಓಪನ್‌ಹೌಸ್ ಸಭೆಯನ್ನು ಸರ್ಕಾರ ಹಾಗೂ ನಾಸ್ಕಾಂ ನಡುವೆ ಆಯೋಜಿಸಲಾಗಿದೆ ಎಂದು ತಿಳಿಸಿದರು. ಹತ್ತುಸಾವಿರ ಸ್ಟಾರ್ಟ್ ಅಪ್ ಗೋಧಾಮುಗಳನ್ನು ಬೆಂಗಳೂರಿನಲ್ಲಿ ಆರಂಭಿಸಲು ಚಿಂತಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಸಚಿವರು ತಿಳಿಸಿದರು.

ಬಾಬು/ಕೆಪಿಪಿ/ಕೆಎಂ

# ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 9 ವಾಹನ ಚಾಲಕರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 9 ವಾಹನ ಚಾಲಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಹಾಗೂ ಆಹ್ವಾನಿಸಿದ ಅರ್ಜಿಗಳ ಸವಿವರವಾದ ಅಧಿಸೂಚನೆಯನ್ನು ಅಂತರ್‌ಜಾಲ **http://karnatakajudiciary.kar.nic.in** ನಲ್ಲಿ ಪಡೆಯಬಹುದು ಎಂದು ಕರ್ನಾಟಕ ಉಚ್ಛ ನ್ಯಾಯಾಲಯದ ರಿಜಿಸ್ಟ್ರಾರ್(ನೇಮಕಾತಿ) ಶ್ರೀ ಎನ್.ಕೆ. ಸುಧೀಂದ್ರ ರಾವ್ ತಿಳಿಸಿದ್ದಾರೆ.

-------------------